ಸಂಪುಟ:11 ಸಂಚಿಕೆ:03 ದಿನಾಂಕ: ನವಂಬರ್. 30,2015

ಮಾಧ್ಯಮ ಮಂಗಳ

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

ಅಬ್ದುಲ್ ಸತ್ತಾರ್ ಈಧಿ ಎಂಬ ಪಾಕಿಸ್ತಾನಿ ಸಂತ
ಪುಟ: 2

ಕಾರ್ವಿಂಗ್ ವೋಡಿ-ನೋಡಿ
ಪುಟ: 3

ಜಗತ್ತಿನ ರೇಟಿಂಗ್‌ನಲ್ಲಿ ಉಪ್ಪಿ-2 ಮುಂದು
ಪುಟ: 4

ಭಾಷೆಗೆ ಲಿಪಿ ಇಲ್ಲದಿದ್ದರೂ ಲಿಪಿಗೆ ಭಾಷೆ ಇರುತ್ತದೆ

ಎಸ್.ವಿ.ಪಿ ಕನ್ನಡದ ಗಿಳಿವಿಂಡು ಸಮಾವೇಶದಲ್ಲಿ ಪ್ರೊ. ಶೆಟ್ಟರ್ ಅಭಿಮತ

ಮಂಗಳಗಂಗೋತ್ರಿ: ವೇದಿಕೆಗಳಲ್ಲಿ ಭಾಷಣ ಮಾಡುವವರು ಕನ್ನಡ ಭಾಷೆ ಅಳಿಯುತ್ತಿದೆ ಎಂದು ಹೇಳುವುದು ಸಲ್ಲದು. ಯಾಕೆಂದರೆ ಕನ್ನಡ ಭಾಷೆಗೆ ಇಂದಿಗೂ ಭದ್ರ ಭವಿಷ್ಯವಿದೆ ಎಂದು ಇತಿಹಾಸ ತಜ್ಞ ಪ್ರೊ. ಷ.ಶೆಟ್ಟರ್ ತಿಳಿಸಿದ್ದಾರೆ.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಾ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆಯ ಹಳೇ ವಿದ್ಯಾರ್ಥಿ ಸಂಘ 'ಗಿಳಿವಿಂಡು' ಚಾಲನೆ ಹಾಗೂ ಸಮಾವೇಶದ ಸಭಾ ಕಾರ್ಯಕ್ರಮದಲ್ಲಿ ಅವರು 'ವರ್ತಮಾನದ ಕನ್ನಡ' ಕುರಿತು ಉಪನ್ಯಾಸ ನೀಡಿದರು.

ಭಾಷೆಗೆ ಲಿಪಿ ಇಲ್ಲದಿದ್ದರೂ ಲಿಪಿಗೆ ಭಾಷೆ ಇರುತ್ತದೆ. ಸಂಸ್ಕೃತಕ್ಕೆ ಲಿಪಿ ಇಲ್ಲದ ಕಾರಣ ಪ್ರಥಮ ಕೃತಿ ಕನ್ನಡದಲ್ಲೇ ಮುದ್ರಣಗೊಂಡಿದೆ. ಆಂಗ್ಲ ಭಾಷಿಕರು ಇತರ ಭಾಷೆಗಳ ಜತೆ ಹೊಂದಿಕೊಂಡಿರುವುದರಿಂದ ಆ ಭಾಷೆ ಬೆಳೆಯುತ್ತಿದೆ.ಯಾವುದೇ ಭಾಷೆ ಬೆಳವಣಿಗೆಯಾಗಬೇಕಾದರೆ ಪರ ಭಾಷೆಗಳ ಜತೆ ಹೊಂದಾಣಿಕೆ ಮಾಡಿಕೊಳ್ಳುವುದು ಅನಿವಾರ್ಯ ಬೆಂಗಳೂರಿನಲ್ಲಿ ಮಲಯಾಳಂ, ತೆಲುಗು ಹಾಗು ತಮಿಳು ಭಾಷಿಕರು ತಮ್ಮವರ ಜತೆ ತಮ್ಮದೇ ಭಾಷೆ ಮಾತನಾಡುತ್ತಾರೆ. ಆದರೆ ಬೆಂಗಳೂರಿನವರು ಆಂಗ್ಲ ಭಾಷೆಗೆ ಮಹತ್ವ ನೀಡುತ್ತಾರೆ. ಇದ-ರಿಂದಾಗಿ ಕನ್ನಡ ಭಾಷೆ ಬಳಕೆ ಕಡಿಮೆಯಾಗುತ್ತಿದ್ದು, ಇದಕ್ಕೆ ನಾವೇ ಹೊಣೆಗಾರರು. ಈ ವಿಚಾರದಲ್ಲಿ ಸರ್ಕಾರವನ್ನು ದೂರಿ ಏನೂ ಪ್ರಯೋಜನವಿಲ್ಲ. ನಮ್ಮ ಮನೆಯಲ್ಲಿ ನಮ್ಮದೇ ಭಾಷೆಗೆ ಆದ್ಯತೆ ನೀಡಿದರೆ ಕನ್ನಡ ಬೆಳೆಸಬಹುದು. ಜತೆಗೆ ಹಳೆ ಕನ್ನಡಕ್ಕೂ ಮಹತ್ವ ನೀಡಬೇಕಾಗಿದೆ ಎಂದು ಅವರು ಹೇಳಿದರು.

ಸಮಾವೇಶ ಉದ್ಘಾಟಿಸುತ್ತಿರುವ ಪ್ರೊ..ಶೆಟ್ಟರ್.(ಎಡದಿಂದ) ಪ್ರೊ.ಬಿ.ಶಿವರಾಮ ಶೆಟ್ಟಿ, ಪ್ರೊ.ಬಿ.ಎ.ವಿವೇಕ್ ರೈ ಮತ್ತು ಮಂಗಳೂರು ವಿ.ವಿ ಕುಲಪತಿ ಪ್ರೊ.ಕೆ.ಭೈರಪ್ಪ ಅವರನ್ನು ಚಿತ್ರದಲ್ಲಿ ಕಾಣಬಹುದು.

ಎಸ್.ವಿ. ಪರಮೇಶ್ವರ ಭಟ್ ಅವರು ಉಪನ್ಯಾಸ ವೃತ್ತಿಯನ್ನು ಕಾಯಕವೇ ಕೈಲಾಸ ಎಂದು ಭಾವಿಸಿದ್ದು, ಕನ್ನಡ ಭಾಷೆ ಬೆಳವಣಿಗೆಗೆ ಅವರು ನೀಡಿದ ಕೊಡುಗೆ ಅಪಾರ. ಕೊಣಾಜೆಯಲ್ಲಿ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಮೊದಲೇ ಅವರು ಮಂಗಳಗಂಗೋತ್ರಿ ಎನ್ನುವ ಹೆಸರು ನೀಡಿದ್ದರು ಎಂದು ವಿಶ್ರಾಂತ ಕುಲಪತಿ ಹಾಗೂ ಸಂಶೋಧಕ ಪ್ರೊ.ಬಿ.ಎ.ವಿವೇಕ್ ರೈ ತಿಳಿಸಿದರು.

ಶರೀರಕ್ಕೆ ವಯಸ್ಸು ಆದರೂ ಮನಸ್ಸು, ಉತ್ಸಾಹಕ್ಕೆ ವಯಸ್ಸು ಎಂಬುವುದಿಲ್ಲ. ಮುಂದಿನ ಬದುಕನ್ನು ಅನುಭವಿಸುವುದಕ್ಕೆ ಗಿಳಿವಿಂಡು ಉತ್ತಮ ಅವಕಾಶ ನೀಡಿದ್ದು, ಈ ಕಾರಣದಿಂದ ಯಾವುದೋ ಊರಲ್ಲಿದ್ದವರು ಸಮಾವೇಶದಲ್ಲಿ ಭಾಗವಹಿಸಿದ್ದಾರೆ, ಇಲ್ಲಿ ಸೇರಿರುವ ಹಳೆಯ ಗೆಳೆಯರು ಮತ್ತೆಂದೂ ಅಗಲದೆ ಗಿಳಿವಿಂಡು ಶಾಶ್ವತವಾಗಿ ನೆಲೆ ನಿಲ್ಲುವಂತೆ ಮಾಡಬೇಕು ಎಂದು ರೈ ಕರೆ ನೀಡಿದರು.

ಮಂಗಳೂರು ವಿ.ವಿ ಕುಲಪತಿ ಪ್ರೊ.ಕೆ.ಭೈರಪ್ಪ ಅಧ್ಯಕ್ಷತೆ ವಹಿಸಿದ್ದರು. ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ ಅಧ್ಯಕ್ಷ ಪ್ರೊ.ಬಿ.ಶಿವರಾಮ ಶೆಟ್ಟಿ ಸ್ವಾಗತಿಸಿದರು.ಡಾ.ನಾಗಪ್ಪ ಗೌಡ ವಂದಿಸಿದರು.

ಪ್ರೊ. ಜೋಗನ್ ಶಂಕರ್ ಕೆಲಸಗಳು ಪ್ರಶಂಸನೀಯ: ಪ್ರಸಾದ್

ಮಂಗಳಗಂಗೋತ್ರಿ: ಕ್ರೂರ ದೇವದಾಸಿ ಪದ್ದತಿಯ ಮೇಲೆ ಅಧ್ಯಯನವನ್ನು ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು

ಮಂಗಳೂರು ವಿಶ್ವವಿದ್ಯಾನಿಲಯದ ವತಿಯಿಂದ ಸನ್ಮಾನಗೊಂಡ ಪ್ರೊ. ಜೋಗನ್ ಶಂಕರ್ ಅವರು ಗಣ್ಯರೊಂದಿಗೆ

ಮಾಡಿ, ಅದರಲ್ಲಿನ ಬಲಿಪಶುಗಳನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನವನ್ನು ಪ್ರೊ.ಜೋಗನ್ ಶಂಕರ್ ಮಾಡಿದ್ದಾರೆ. ಅವರ ಸಮಯದಲ್ಲಿ ಅಧ್ಯಯನವು ಅಷ್ಟು ಸುಲಭವಾಗಿರಲಿಲ್ಲ. ಆದರೆ ಅವರು ಸಮಾಜದಲ್ಲಿನ ಅನಿಷ್ಟ ಪದ್ದತಿಗಳನ್ನು ನಿರ್ಮೂಲನೆ ಮಾಡಲು ಸಾಕಷ್ಟು ಶ್ರಮಿಸಿದ್ದಾರೆ ಎಂದು ಕರ್ನಾಟಕ ಕಂದಾಯ ಸಚಿವ ಶ್ರೀನಿವಾಸ್ ಪ್ರಸಾದ್ ಹೇಳಿದರು.

ಕುವೆಂಪು ವಿಶ್ವವಿದ್ಯಾನಿಲಯದ ಹಾಲಿ ಕುಲಪತಿಗಳಾದ ಪ್ರೊ.ಶಂಕರ್ ಅವರಿಗೆ ಮಂಗಳೂರು ವಿಶ್ವವಿದ್ಯಾನಿಲಯ ಮಾತನಾಡಿದರು.

ಪ್ರೊ.ಜೋಗನ್ ಶಂಕರ್ ಅವರ ಕೆಲಸಗಳು ಪ್ರಶಂಸನೀಯವಾದವುಗಳು. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಂಬೇಡ್ಕರ್ ಭವನದ ನಿರ್ಮಾಣಕ್ಕಾಗಿ ಸರಕಾರಕ್ಕೆ ಶಿಫಾರಸು ಮಾಡುತ್ತೇನೆ ಎಂದು ಅವರು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ. ಕಾಳೇಗೌಡ ನಾಗವಾರ ಅಭಿನಂದನಾ ಭಾಷಣವನ್ನು ಮಾಡುತ್ತಾ ಜೋಗನ್ ಶಂಕರ್ ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಕಗೊಂಡ ತಕ್ಷಣವೇ ಪ್ರಗತಿಪರ ಕೆಲಸಗಳಿಗೆ ಮುಖ ಮಾಡಿದರು. ಅವರು ನಿಸ್ವಾರ್ಥ ಭಾವದಿಂದ ಅನೇಕ ಕಡೆಗಳಲ್ಲಿ ಸಮಾಜದ ಅನಿಷ್ಟ ಪದ್ದತಿಗಳ ವಿರುದ್ದ ಹೋರಾಡಿದ್ದಾರೆ. ನಮ್ಮ ದೇಶದಲ್ಲಿ ಅನೇಕರು ಪ್ರೊ. ಶಂಕರ್ ಅವರಂತೆ ಜಾತಿ ವ್ಯವಸ್ಥೆಯ ವಿರುದ್ದ ಹೋರಾಟ ನಡೆಸಿದ್ದಾರೆ, ಆದರೂ ನಾವು ಇಂದಿಗೂ ಜಾತಿ ವ್ಯವಸ್ಥೆಯಿಂದ ಸಂಭವಿಸುವ ಸಮಸ್ಯೆಗಳಿಂದ ಬಳಲುತ್ತಿದ್ದೇವೆ ಎಂದರು.

ವಿಶ್ವವಿದ್ಯಾನಿಲಯದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರೊ. ಜೋಗನ್ ಶಂಕರ್ ಮಂಗಳೂರು ವಿಶ್ವವಿದ್ಯಾನಿಲಯ ಅಧ್ಯಯನಕ್ಕೆ ವಿಫುಲ ಅವಕಾಶ ಮಾಡಿಕೊಟ್ಟಿದೆ. ಹಲವಾರು ವ್ಯಕ್ತಿಗಳು ನನ್ನನ್ನು ಪ್ರೋತ್ಸಾಹಿಸಿ ಬೆಳೆಸಿದ್ದಾರೆ. ನನ್ನ ಜೀವನದ ಅದ್ಭುತ ಕ್ಷಣಗಳನ್ನು ಈ ವಿಶ್ವವಿದ್ಯಾನಿಲಯದಲ್ಲಿ ಕಳೆದಿದ್ದೇನೆ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ಕೆ.ಭೈರಪ್ಪ ಮಾತನಾಡಿ ಪ್ರೊ. ಜೋಗನ್ ಶಂಕರ್ ಅವರು ಮಂಗಳೂರು ವಿಶ್ವವಿದ್ಯಾನಿಲಯದಿಂದ ಕುಲಪತಿಗಳಾಗಿ ಹೊರ ಹೊಮ್ಮುತ್ತಿರುವ ಐದನೇ ವ್ಯಕ್ತಿಯಾಗಿದ್ದಾರೆ ಅವರು ವಿದ್ಯಾರ್ಥಿಗಳಿಗೆ ಪ್ರೇರಕರಾಗಿದ್ದಾರೆ ಎಂದರು.

ಮಂಗಳೂರು ವಿವಿ ವಿದ್ಯಾರ್ಥಿ ಪರಿಷತ್‌ಗೆ ಆಯ್ಕೆ

ಮಂಗಳಗಂಗೋತ್ರಿ:ವಿಶ್ವವಿದ್ಯಾನಿಲಯ ಚುನಾವಣೆಯ ಮೂಲಕ ವಿದ್ಯಾರ್ಥಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಕ್ರಮವನ್ನು ಅನುಸರಿಸುತ್ತಾ ಬಂದಿದೆ. ಹಾಗೆಯೇ ಈ ಬಾರಿಯೂ ಚುನಾವಣೆ ಅತ್ಯಂತ ಯಶಸ್ವಿಯಾಗಿ ನಡೆದಿದೆ ಎಂದು ವಿದ್ಯಾರ್ಥಿ ಕ್ಷೇಮ ಪಾಲನ ನಿರ್ದೇಶಕ ಪ್ರೊ.ಪಿ.ಎಲ್.ಧರ್ಮ ತಿಳಿಸಿದರು.

ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿಯಲ್ಲಿ ಸೆಪ್ಟೆಂಬರ್ 22 ರಂದು ನಡೆದ 2015-16 ನೇ ಸಾಲಿನ ವಿದ್ಯಾರ್ಥಿ ಸಂಘದ ಚುನಾವಣಾ ಪ್ರಕ್ರಿಯೆ ಮುಗಿದ ಬಳಿಕ ಮಾತನಾಡಿದರು.

ಮಾನ್ಯ ಕುಲಪತಿ ಮತ್ತು ಕುಲಸಚಿವರ ಮಾರ್ಗದರ್ಶನದಲ್ಲಿ ಚುನಾವಣೆ ನಡೆದಿದ್ದು, ಈ ಬಾರಿ ಕಳೆದ ವರ್ಷಕ್ಕಿಂತ ಹೆಚ್ಚಿನ ತರಗತಿ ಪ್ರತಿನಿಧಿಗಳಿದ್ದು, ಈ ಪ್ರತಿನಿಧಿಗಳು ಆರು ಜನ ನಾಯಕರುಗಳನ್ನು ಸ್ವಾತಂತ್ರ್ಯವಾಗಿ ಆಯ್ಕೆ ಮಾಡಿದ್ದಾರೆ.ವಿದ್ಯಾರ್ಥಿಗಳೆಲ್ಲಾ ಚುನಾವಣಾ ನಿಯಮವನ್ನು ಸರಿಯಾಗಿ ಪಾಲನೆ ಮಾಡಿದ್ದಾರೆ ಎಂದು ತಿಳಿಸಿದರು. ಚುನಾವಣಾ ಅಧಿಕಾರಿ ಪ್ರೊ.ಎ.ಎಮ್ ಖಾನ್ ಮಾತನಾಡಿ, ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಶಿಸ್ತನ್ನು ಪಾಲಿಸುವವರು; ಹಾಗೆಯೇ ಚುನಾವಣೆಯಲ್ಲಿ ಕೂಡ ನಿಯಮಗಳನ್ನು ಪಾಲಿಸುವ ಮೂಲಕ ಚುನಾವಣೆಯನ್ನು ಯಶಸ್ವಿಗೊಳಿಸಿದ್ದಾರೆ.

ನಾಲ್ಕನೇ ಪುಟಕ್ಕೆ

ಸಂಪಾದಕೀಯ

ಡಿಜಿಟಲ್ ಇಂಡಿಯಾಗೆ ಕರೆ

ಮೇಕ್ ಇನ್‌ಇಂಡಿಯಾ, ಸ್ವಚ್ಛ ಭಾರತ, ಸ್ಮಾರ್ಟ್ ಸಿಟಿಗಳ ಬಳಿಕ ಪ್ರಧಾನಿ ನರೇಂದ್ರ ಮೋದಿ ಡಿಜಿಟಲ್ ಇಂಡಿಯಾ ಕಾರ್ಯಕ್ರಮಕ್ಕೆ ದೆಹಲಿಯಲ್ಲಿ ಚಾಲನೆ ನೀಡಿದ್ದಾರೆ. ಆಡಳಿತವನ್ನು ಹೆಚ್ಚು ಉತ್ತರದಾಯಿತ್ವಗೊಳಿಸಿ ಪಾರದರ್ಶಕವಾಗಿರಿಸಲು ಹಾಗೂ ಜನರಿಗೆ ಸರ್ಕಾರದ ಸೇವೆಗಳು ಆನ್‌ಲೈನ್ ಮೂಲಕ ನೀಡಲು ಡಿಜಿಟಲ್ ಇಂಡಿಯಾ ಸಹಾಯಕವಾಗಿದೆ. ಡಿಜಿಟಲ್ ಇಂಡಿಯಾ ಪ್ಲಾಟ್ ಫಾರಂ, ಡಿಜಿಟಲ್ ಲಾಕರ್, ನ್ಯಾಶ್‌ನಲ್ ಸ್ಕಾಲರ್ ಶಿಪ್ ಪೋರ್ಟಲ್, ಇ–ಹೆಲ್ತ್, ಇ–ಎಜುಕೇಶನ್ ಸೇರಿದಂತೆ ಹಲವಾರು ಕಾರ್ಯಕ್ರಮಗಳ ಮೂಲಕ ಯೋಜನೆ ಜಾರಿಯಾಗಲಿದೆ.ಭಾರತವನ್ನು ಡಿಜಿಟಲೀಕರಿಸಲು ಭಾರತದ ಉದ್ಯಮಿಗಳು ಕೂಡ ಮೋದಿ ಜೊತೆ ತಮ್ಮ ಕೈ ಜೋಡಿಸಿದ್ದು ಈ ಎಲ್ಲಾ ಕಾರ್ಯಕ್ರಮಗಳೊಂದಿಗೆ ಈ ಯೋಜನೆಯನ್ನು ಯಶಸ್ವಿಗೊಳಿಸಲು ಒಕ್ಕೊರಲಾಗಿ ನಿರ್ಧಾರಿಸಿರುವುದು ಪ್ರಶಂಸನೀಯ.

ಪ್ರಧಾನಿ ಮೋದಿ ಅಮೆರಿಕಾ ಭೇಟಿ ಸಮಯದಲ್ಲಿ ಗೂಗಲ್, ಮೈಕ್ರೋಸಾಫ್ಟ್, ಫೇಸ್‌ಬುಕ್ ಹಾಗೂ ಇನ್ನಿತರ ಐಟಿ ಸಂಸ್ಥೆಗಳ ಸಿ.ಇ.ಒಗಳನ್ನು ಭೇಟಿ ಮಾಡಿರುವಂತದ್ದು, ಮೋದಿ ಕನಸಿನ ಕೂಸಾದ ಡಿಜಿಟಲ್ ಇಂಡಿಯಾಕ್ಕೆ ಮತ್ತಷ್ಟು ಪುಷ್ಟಿ ಸಿಕ್ಕಿದಂತಾಗಿದೆ. ಹಲವು ಐಟಿ ಕಂಪೆನಿಗಳ ಸಿ.ಇ.ಒಗಳು ಭಾರತೀಯರೇ ಆದಕಾರಣ ಭಾರತವನ್ನು ಡಿಜಿಟಲೀಕರಣವಾಗಿಸಲು ತಾವು ನೆರವಾಗುತ್ತೇವೆ ಎನ್ನುವ ಸಂದೇಶವನ್ನು ನೀಡಿದ್ದಾರೆ. ಇದು ಭಾರತ–ಅಮೆರಿಕಾ ಸಂಬಂಧ ಬೆಳೆಸುವಲ್ಲಿ ಕೂಡ ಮಹತ್ತರದ ಪಾತ್ರ ವಹಿಸುವಲ್ಲಿ ಉತ್ಪ್ರೇಕ್ಷೆಯಾಗದು. ಅಮೆರಿಕಾದಲ್ಲಿರುವ ಅನಿವಾಸಿ ಭಾರತೀಯರು ಹಾಗೂ ಮೋದಿ ನಡುವೆ ಮಾತಿನ ಕಾರ್ಯಕ್ರಮ ಆಯೋಜಿಸಿದ್ದು ಅನಿವಾಸಿ ಭಾರತೀಯರ ಪ್ರಶ್ನೆಗೆ ಮೋದಿ ನಯವಾಗಿ ಉತ್ತರ ನೀಡಿ ಜನರ ಗೊಂದಲಕ್ಕೆ ತೆರೆ ಎಳೆದಿದ್ದಾರೆ.

ಮೋದಿ ಅನೇಕ ಟೀಕೆಗಳಿಗೆ ಒಳಪಟ್ಟರೂ ತನ್ನ ಅನೇಕ ಯೋಜನೆಗಳಿಂದಾಗಿ ಅಷ್ಟೆ ವೇಗದಲ್ಲಿ ಜನರ ಮನದಲ್ಲಿ ನೆಲೆಯಾಗುತ್ತಿದ್ದಾರೆ. ಅನೇಕ ವಿದೇಶ ಭೇಟಿ ಮತ್ತು ಒಪ್ಪಂದದಿಂದ ಭಾರತ ಕೂಡ ಬದಲಾವಣೆಯನ್ನು ಕಾಣುತ್ತಿದೆ. 'ಅಚ್ಛೆ ದಿನ್ ಆನೇವಾಲ ಹೈ' ಹೇಳಿದರು, ಈ ಯೋಜನೆಗಳು ಎಷ್ಟರ ಮಟ್ಟಿಗೆ ಯಶಸ್ಸು ಕಾಣಲಿದೆ ಅನ್ನುವುದನ್ನು ಕಾದುನೋಡಬೇಕಿದೆ. ಕೇವಲ ಯೋಜನೆಗಳ ಅನುಮೋದನೆ ಮಾತ್ರವಲ್ಲದೆ ಯೋಜನೆಗಳು ಜಾರಿಯಾಗಬೇಕಾಗಿದೆ. ಈ ಕಾರ್ಯಕ್ರಮಗಳು ಯಶಸ್ಸು ಕಂಡಲ್ಲಿ ಭಾರತ ಡಿಜಿಟಲ್ ದೇಶ ಆಗುವುದರಲ್ಲಿ ಸಂಶಯವಿಲ್ಲ, ಆದೇ ಭಾರತೀಯರ ಆಶಯ ಕೂಡ.

ಕಾರ್ಟೂನ್ ಕಾರ್ನರ್

ಸಾಯಿರಾಜ್

ಸಂಪಾದಕರಿಗೆ ಪತ್ರ

ಭಾರತಕ್ಕೆ ನುಸುಳುವ ಚೈನಾ ಪಟಾಕಿಯನ್ನು ತಡೆಯಿರಿ

ಭಾರತಕ್ಕೆ ಭಾರೀ ಪ್ರಮಾಣದಲ್ಲಿ ಚೈನಾ ಪಟಾಕಿಗಳ ಹಾವಳಿಯಾಗುತ್ತಿದೆ. ಇದು ಭಾರತದಲ್ಲಿ ತಯಾರಾಗುವ ಪಟಾಕಿಗಳಿಗೆ ಭಾರೀ ಹೊಡೆತವನ್ನು ಹೊಡೆತ ನೀಡುವುದರಲ್ಲಿ ಸಂಶಯವಿಲ್ಲ. ಯಾಕೆಂದರೆ ತಮಿಳುನಾಡಿನ ಶಿವಕಾಶಿಯ ಪಟಾಕಿ ತಯಾರಿಕಾ ಕಾರ್ಖಾನೆಯಲ್ಲಿ ಸಾವಿರಾರು ಕಾರ್ಮಿಕರಿದ್ದು ಇವರ ಕೂಳು ಪಟಾಕಿ ತಯಾರಿಕೆಯಿಂದ ಬರುವ ಸಂಪಾದನೆ. ಚೈನಾ ಪಟಾಕಿ ಅತೀ ಕಡಿಮೆಯಲ್ಲಿ ದೊರೆಯುತಿದ್ದು ಎಲ್ಲಾ ಮಾರುಕಟ್ಟೆಯನ್ನು ಆವರಿಸಲಿದೆ.ಇದರಿಂದ ಭಾರತದಲ್ಲಿ ತಯಾರಾಗುವ ಪಟಾಕಿಗಳ ಬೇಡಿಕೆ ಕಡಿಮೆಯಾಗಿ ಕಾರ್ಮಿಕರು ನಿರುದ್ಯೋಗಿಗಳಾಗುವ ಲಕ್ಷಣಗಳು ಕಾಣುತ್ತಿದ್ದು ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡು ಕಾರ್ಮಿಕರ ರಕ್ಷಣೆಗೆ ಸಹಾಯ ಹಸ್ತ ಚಾಚ ಬೇಕಾಗಿದೆ.

ಕಿರಣ್

ಅಬ್ದುಲ್ ಸತ್ತಾರ್ ಈಧಿ ಎಂಬ ಪಾಕಿಸ್ತಾನಿ ಸಂತ

ಪಾಕಿಸ್ತಾನದಂತಹ ಅರಾಜಕ, ರೋಗಗ್ರಸ್ಥ ದೇಶಕ್ಕೆ ಖಂಡಿತವಾಗಿಯೂ ಇಂತಹ ಸೇವಕನ ಅವಶ್ಯಕತೆ ಇದೆ. ಪಾಕಿಸ್ತಾನ ಎಂದಾಕ್ಷಣ ಕಣ್ಣೆದುರಿಗೆ ಬಂದೆರಗುವ ಪೈಶಾಚಿಕತೆಯ ನಡುವೆ ಕರುಣಾಮಯಿ ಜೀವವೊಂದು ಕಣ್ಣೆದುರಿಗೆ ಬಂದು ನಿಂತಾಗ ಒಮ್ಮೆ ಆಶ್ಚರ್ಯ ಎಂದೆನಿಸಿದರೆ ತಪ್ಪೇನಿಲ್ಲ. ಬಹುಶಃ ಈ ದಯಾಮಯಿ ಮನುಷ್ಯನ ಕುರಿತಾಗಿ ಭಾರತೀಯರಿಗೆ ಮೊನ್ನೆ ಮೊನ್ನೆಯವರೆಗೂ ಅಷ್ಟಾಗಿ ತಿಳಿದಿರಲಿಕ್ಕಿಲ್ಲ. ಯಾವಾಗ ಗೀತಾ ಎನ್ನುವ ಇಪ್ಪತ್ತರ ಹರೆಯದ ಯುವತಿ ಪಾಕಿಸ್ತಾನದಿಂದ ತನ್ನ ತಾಯಿ ನಾಡಿಗೆ ಹದಿನೈದು ವರ್ಷಗಳ ನಂತರ ಸುಸೂತ್ರವಾಗಿ ತನ್ನವರನ್ನು ಅರಸಿ ವಾಪಾಸು ಬರುತ್ತಾಳೋ, ಆಗಲೇ ಭಾರತೀಯರಿಗೆ ಆ ಕರುಣಾಮಯಿಯ ಕುರಿತು ಪರಿಚಯವಾದ್ದು. ಗೀತಾ ಎಂಬ ಭಾರತದ ಕುವರಿ ಆ ಮಹಾ ವ್ಯಕ್ತಿಯ ಆಸರೆಯಲ್ಲಿ ಕಳೆದದ್ದು ಬರೋಬ್ಬರಿ ಹದಿನೈದು ವರ್ಷಗಳು. ಆಕೆ ವಾರಸುದಾರರಿಲ್ಲದೆ ತನ್ನ ಐದನೇ ವಯಸ್ಸಿನಲ್ಲಿ ಭಾರತದ ಗಡಿದಾಟಿ ಪಾಕಿಸ್ತಾನವನ್ನು ತಲುಪಿದ್ದಳು. ಅನಾಥಳಾಗಿ ಉಳಿದ ಗೀತಾಳನ್ನು ಆರೈಕೆ ಮಾಡಿ ಆಶ್ರಯ ಕೊಡುವುದರಿಂದ ಹಿಡಿದು ಆಕೆಯ ತವರನ್ನು ಹುಡುಕಿ ಅವಳನ್ನು ಅವಳ ನೆಲಕ್ಕೆ ತಲುಪಿಸುವ ಕಾರ್ಯ ನಡೆದದ್ದು ಆ ಕರುಣಾಮಯಿಯಿಂದಲೇ. ಹೌದು ಆ ವ್ಯಕ್ತಿಯೇ ಅಬ್ದುಲ್ ಸತ್ತಾರ್ 'ಈಧಿ'.

ಇಂದು ಈಧಿ ಫೌಂಡೇಶನ್ ಪಾಕಿಸ್ತಾನದಲ್ಲಿ ಮನೆ ಮಾತಾದ ಸಾಮಾಜಿಕ ಸಂಸ್ಥೆ. ಅಬ್ದುಲ್ ಸತ್ತಾರ್ ಈಧಿ ಎಂಬ ಗುಜರಾತಿ ಮೂಲದ ಜೀವ ಈ ಸಂಸ್ಥೆಯ ಹಿಂದಿನ ರೂವಾರಿ. ಪಾಕಿಸ್ತಾನದ ಜನತೆ ಈಧಿಯನ್ನು ಸಂತನೆಂದು ಗೌರವಿಸುತ್ತಾರೆ. ಕೊಳೆತು ನಾರುತ್ತಿರುವ ಪಾಕಿಸ್ತಾನದಲ್ಲಿ ಅಸಹಾಯಕ ಕೈಗಳಿಗೆ ಸಹಾಯ ಬೇಕಿದೆ. ಆ ಸಮಯದಲ್ಲಿ ಮನುಕುಲದ ಸೇವೆಗಾಗಿ ಹುಟ್ಟಿಕೊಂಡ ಆಶಾಕಿರಣವೇ ಈ ಈಧಿ ಫೌಂಡೇಶನ್. ಇಲ್ಲಿಯವರೆಗೆ ಸರಿಸುಮಾರು ಮೂವತ್ತೈದು ಅನಾಥ ಮಕ್ಕಳನ್ನು ರಕ್ಷಣೆ ಮಾಡಿ ಅನ್ನ, ಬಟ್ಟೆ, ಬದುಕನ್ನು ನೀಡಿದೆ.

ಅಂಧ ಶ್ರದ್ಧೆಯ ಜಿಹಾದಿಗಳ ತವರು ನೆಲದಲ್ಲಿ ಅಲ್ಲಿಯ ಜನರ ಸೇವೆಗಾಗಿ ನಿಂತಿರುವ ಈಧಿ ಶ್ರೇಷ್ಠ ವ್ಯಕ್ತಿಯಾಗಿ ಕಾಣುತ್ತಾರೆ. ಈಧಿ ಕೇವಲ ಅನಾಥರ ರಕ್ಷಣೆ ಮಾತ್ರವಲ್ಲದೇ, ಶಿಕ್ಷಣ, ಶಿಶು ಸಂರಕ್ಷಣೆ, ವೈದ್ಯಕೀಯ ಸೇವೆಗಳನ್ನು ನೀಡುತ್ತಿದ್ದಾರೆ. ಮುಖ್ಯವಾಗಿ ಪಾಕಿಸ್ತಾನಿ ಮೂಲಭೂತವಾಗಿಗಳು ವಿರೋಧಿಸುವ ಮಹಿಳಾ ಉದ್ಯೋಗದ ಪರವಾಗಿ ಈಧಿ ನಿಂತಿದ್ದಾರೆ. ಮಹಿಳಾ ಉದ್ಯೋಗಿಗಳಿಗೆ ಅವರು ಪ್ರೋತ್ಸಾಹ ಮತ್ತು ರಕ್ಷಣೆ ನೀಡುವ ಅಭಯ ಹಸ್ತವಾಗಿದ್ದಾರೆ.

ಪಾಕಿಸ್ತಾನ ಮತ್ತು ಭಾರತದ ನಡುವೆ ಸಂಬಂಧ ಮುರಿದು ಬಿದ್ದು ವರುಷಗಳು ಉರುಳಿವೆ, ಒಂದೆಡೆ ಸಣ್ಣ ಭೀತಿಯೂ ಸಹ ಎದುರಾದಂತೆ ಕಾಣುತ್ತಿದೆ. ನಾಲಿಗೆಯಲ್ಲಿ ಮೂಳೆಯಿಲ್ಲ ಎಂಬುದನ್ನು ಗಟ್ಟಿ ಮಾಡುವಂತೆ ಪಾಕಿಸ್ತಾನ ಮೊನ್ನೆ ಮೊನ್ನೆಯಷ್ಟೇ ಪರಮಾಣು ಬಾಂಬ್ ಎಂದು ಕೂಗಾಡಿದೆ. ಉಪಖಂಡದ ಭಾಗದಲ್ಲಿ ಭೀತಿಯ ವಾತಾವರಣ ನಿರ್ಮಾಣವಾಗಿದೆ. ಗಡಿಯಲ್ಲಿಯೂ ಉಸಿರುಗಟ್ಟಿಸುವ ವಾತಾವರಣ ಇದೆ. ಇದರ ನಡುವೆ ಪಾಕಿಸ್ತಾನಿಯರಿಂದ ಅಪ್ರಚೋದಿತ ಗುಂಡಿನ ದಾಳಿಗಳು ಪದೇ ಪದೇ ನಡೆಯುತ್ತಲೇ ಇದೆ. ಅಮಾಯಕ ಜೀವಗಳು ಎರಡೂ ಕಡೆಗಳಿಂದ ಬಲಿಯಾಗುತ್ತಿರುವುದು ಸಾಮಾನ್ಯವಾಗಿ ಬಿಟ್ಟಿದೆ. ಇಂತಹ ಸಂದರ್ಭದಲ್ಲಿ ಗೀತಾಳ ಬರುವಿಕೆ ಬಿಗಿ ಉಸಿರು ಸಡಿಲಗೊಳ್ಳುವ ನಿರೀಕ್ಷೆಯನ್ನು ಮೂಡಿಸಿದೆ. ಅಬ್ದುಲ್ ಸತ್ತಾರ್ ಈಧಿಯಲ್ಲಿ ಮನುಷ್ಯ ಪ್ರೀತಿ ತುಂಬಿರುವುದು ಕಾಣುತ್ತದೆ. ಗೀತಾಳ ಆಗಮನವು ಭಾರತೀಯರ ಭಾವನೆಯಲ್ಲಿ ಸಣ್ಣ ಏರಿಳಿತ ಸೃಷ್ಟಿಯಾಗುವಂತೆ ಮಾಡಿದೆ. ಪಾಕಿಸ್ತಾನವನ್ನು ನಾವು ನೋಡುವ ಹಾಗೂ ಪಾಕಿಸ್ತಾನ ನಮ್ಮನ್ನು ನೋಡುವದೃಷ್ಟಿಕೋನದ ಬದಲಾವಣೆ ಇಲ್ಲಿಂದಲೇ ಆರಂಭವಾಗಬೇಕು. ಉಭಯ ದೇಶಗಳು ಹೊಂದಿರುವ ಸಮಸ್ಯೆಗಳನ್ನು ಕೇವಲ ಮಾತುಕತೆಯಿಂದಲೇ ಕುಳಿತು ಬಗೆಹರಿಸಿಕೊಳ್ಳುವ ಸಂದರ್ಭ ನಿರ್ಮಾಣವಾಗಬೇಕು ಎಂಬುದು ನಮ್ಮ ಆಶಯ. ಕೊನೆಯದಾಗಿ "ಹ್ಯಾಟ್ಸ್ ಆಫ್ ಟು ಪಾಕಿಸ್ತಾನಿ ಬಾಯಿಜಾನ್ ಅಬ್ದುಲ್

ಸಾಯಿರಾಜ್ ನಾವುಂದ

ಯಾಂತ್ರಿಕೃತ ವ್ಯವಸಾಯ

'ನೇಗಿಲ ಹಿಡಿದು ಹೊಲದೊಳು ಹಾಡುತಾ ಉಳುವಾ ಯೋಗಿಯ ನೊಡಲ್ಲಿ' ಎಂಬ ಕುವೆಂಪು ಅವರ ಹಾಡು ಯಾರಿಗೆ ತಾನೆ ನೆನಪಿಲ್ಲ ಹೇಳಿ. ಇದು ಅಷ್ಟು ಜನಪ್ರಿಯ ಹಾಡು. ಆದರೆ ಈ ಹಾಡಿಗೆ ಪೂರಕ ಎಂಬಂತೆ ನೇಗಿಲನ್ನು ಹಿಡಿದು ಹೊಲದಲ್ಲಿ ಹಾಡುವ ರೈರು ಈಗ ಸಿಗುವರೇ? ತುಂಬಾ ಅಪರೂಪ ಅದರಲ್ಲೂ ವಿಶೇಷವಾಗಿ ಮಂಗಳೂರಿನಲ್ಲಿ ಅಂತೂ ಕಾಣಸಿಗುವುದು ಮರುಭೂಮಿಯಲ್ಲಿ ಓಯಸಸ್ ಕಂಡಂತೆ, ಅಷ್ಟು ಅಪರೂಪ ಈ ದೃಶ್ಯ ಕಾವ್ಯ.

ಕೆಲವು ವರುಷಗಳ ಹಿಂದೆ ತುಳುನಾಡಿನಲ್ಲಿ ವ್ಯವಸಾಯ ಪ್ರಾರಂಭವಾಯಿತೆಂದರೆ ಸಾಕು ಕೃಷಿ ಕುಟುಂಬದಲ್ಲಿ ಅದೇನು ಸಡಗರ, ಏನು ಸಂಭ್ರಮ...

ಮುಂಜಾವಿನ ಮಂದ ಬೆಳಕಿನಲ್ಲಿ ರೈತನ ಇಂಪಾದ ಹಾಡು ಶುರುವಾಗುತ್ತಿತ್ತು. ಇದನ್ನು ತುಳುವಿನಲ್ಲಿ 'ಉರಲ್' ಎಂದು ಕರೆಯುತ್ತಾರೆ. ಆದರೆ ಇಂದು ಕಾಲ ಬದಲಾಗಿದೆ ವ್ಯವಸಾಯ ಎಂಬುದು ಯಂತ್ರಿಕವಾಗಿಬಿಟ್ಟಿದೆ. ರೈತನ ಇಂಪಾದ ಹಾಡಿನ ಬದಲಾಗಿ ಟ್ಯಾಕ್ಟರ್, ಟಿಲ್ಲರ್‌ಗಳ ಆರ್ಭಟ ಕೇಳಿಸುತ್ತದೆ. ನಾಟಿ ಮಾಡುವಾಗ ಹೆಂಗಸರು ತುಳುವಿನ ಪಾಡ್ದನಗಳನ್ನು ಹಾಡುತ್ತಿದ್ದರು. ಅದು ತುಳುವರ ಜನಪದೀಯ ಹಾಡು. ಪಾಡ್ದನ ಈಗಂತು ಕೇಳ ಸಿಗುವುದಿಲ್ಲ. ನಾಟಿ ಮಾಡುದಕ್ಕೂ ಯಂತ್ರ ಬಂದಿದೆ. ಕೇವಲ ಉಳುಮೆ, ನಾಟಿಗೆ ಯಂತ್ರ ಸೀಮಿತವಾಗದೆ ಬಿತ್ತನೆ ಮಾಡುದಕ್ಕೆ, ಕಳೆ ಕೀಳುದಕ್ಕೆ, ಕಟಾವಿಗೆ ಮುಂತಾದವುಗಳಿಗೂ ವಿಭಿನ್ನ ಯಂತ್ರ ಬಂದುಬಿಟ್ಟಿದೆ.

ಹಿಂದಿನ ರೈತರ ಉತ್ಸಾಹ, ಸಡಗರಕ್ಕೆ ಸಮಯವೇ ಇಲ್ಲ ಒತ್ತಡದಲ್ಲೇ ವ್ಯವಸಾಯ ಸಾಗುತ್ತಿದೆ. ನೇಗಿಲು, ನೊಗ, ಹಲಗೆ, ಬಿತ್ತನೆಗೆ ಬಳಸುವ ಕ್ಕುಕೆ ಮುಂತಾದವುಗಳು ಕೆಲವೇ ಕೃಷಿ ಮನೆಗಳಲ್ಲಿ ಮಾತ್ರ ಉಳಿದುಕೊಂಡಿವೆ.ಇನ್ನು ಕೆಲವು ವರುಷ ಉರುಳಿದರೆ ಅದನ್ನು ಮ್ಯೂಸಿಯಂನಲ್ಲಿ ನೊಡಬೇಕಾದ ಕಾಲ ಬಂದೀತು!

ಕೇವಲ ವ್ಯವಸಾಯದಲ್ಲಿ ಮಾತ್ರವಲ್ಲದೆ, ತೋಟಗಾರಿಕಾ ಕೃಷಿ ಕೂಡ ಯಾಂತ್ರಿಕೃತವಾಗಿದೆ. ಯಂತ್ರಗಳು ಕೃಷಿಯ ಒಂದು ಭಾಗವಾಗಿ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡಿವೆ .ಇಂದಿನ ಕಾಲ ಘಟ್ಟದಲ್ಲಿ ಯಂತ್ರವನ್ನು ಅವಲಂಬಿಸದೆ ಕೃಷಿ ನಡೆಸುವುದು ತುಂಬಾ ಕಷ್ಟ. ಇದಕ್ಕೆ ಕಾರಣ ಕೂಲಿಯಾಳುಗಳ ಸಮಸ್ಯೆ, ಸಮಯದ ಅಭಾವ ಹಾಗೂ ಅಧಿಕ ಖರ್ಚು ಮುಂತಾದವುಗಳು. ಯಾವುದೇ ವಿಧಾನವಾಗಲಿ, ವ್ಯವಸಾಯ ಎಂಬುದು ಪೂರ್ತಿಯಾಗಿ ತೋಟಗಾರಿಕೆಯಾಗಿ ಮಾರ್ಪಡದೆ ಹೀಗೆ ಮುಂದುವರಿಯಲಿ ಎಂಬುದೇ ನಮ್ಮ ಆಶಯ....

ದಿನೇಶ

ಹಣ್ಣು–ತರಕಾರಿಗಳಲ್ಲಿ ಕಾರ್ವಿಂಗ್ ಮೋಡಿ

ತರಕಾರಿ ಮತ್ತು ಹಣ್ಣುಗಳನ್ನು ಬಳಸಿಕೊಂಡು ನೂರಾರು ಬಗೆಯ ಪ್ರಾಣಿ–ಪಕ್ಷಿಗಳು, ಮರ–ಗಿಡ, ಹಳ್ಳ–ಕೊಳ್ಳ, ನೂರಾರು ದೇವತೆಗಳು, ಜಗದ್ವಿಖ್ಯಾತ ವ್ಯಕ್ತಿ ಮತ್ತು ಸ್ಥಳಗಳ ಪ್ರತಿ–ಕೃತಿ ರಚಿಸುವ ಮೂಲಕ ಜನರ ಮನ ತಣಿಸುವಂತಹ ಕಲೆ ಕಾರ್ವಿಂಗ್ ಕಲೆ.

ಇದು ವಿದೇಶದ ಕಲೆಯಾಗಿದ್ದರೂ ಈಗ ಎಲ್ಲಾ ಕಡೆ ಚಾಲ್ತಿಯಲ್ಲಿದೆ. ಇದರ ವಿಭಿನ್ನ ಸ್ಟೈಲ್ ನಲ್ಲಿ ತಯಾರಿಸುವುದ–ರಿಂದ ಊಟದ ಸಮಯಕ್ಕೆ ಇದು ವಿಶೇಷವಾಗಿ ಜನರನ್ನು ಆಕರ್ಷಿಸುತ್ತದೆ. ಈಗ ಅನೇಕ ಮಾಲ್ ಗಳ ಮುಂದೆ ಸುತ್ತಲೂ ವಿವಿಧ ತರಕಾರಿ, ಹಣು ನ್ನಹಂಪಲಿನಿಂದ ವಿವಿಧ ಕಲಾಕೃತಿಗಳನ್ನು ಮಾಡಿರುತ್ತಾರೆ. ಐಶಾರಾಮಿ ಹೋಟೆಲ್‌ಗಳಲ್ಲಿ ಸಸ್ಯಹಾರಿ ಬೆಲೆಯುಳ್ಳ ಆಹಾರವನ್ನು ಖರೀದಿಸಿದಾಗ ಅದರಲ್ಲಿ ಛೆಫ್ ತನ್ನ ಕಾರ್ವಿಂಗ್ ಕಲಾಕೃತಿಯ ಮೂಲಕ ಚಮತ್ಕಾರವನ್ನು ತೋರಿಸುತ್ತಾನೆ. ಕೆಲವೊಂದು ಸಲ ಆ ಕಲೆಯನ್ನು ನೋಡಿದಾಗ ಆ ಆಹಾರವನ್ನು ತಿನ್ನಲು ಮನಸ್ಸು ಬಾರದಿರುವುದು ಅಕ್ಷರಶಹಃ ಸತ್ಯ ಎಂದರೆ ತಪ್ಪಾಗಲಾರದು.

ಕಾರ್ವಿಂಗ್ ಕಲೆ ಬಹಳಷ್ಟು ಮೆಚ್ಚುಗೆಯನ್ನು ಪಡೆದಿದೆ .ಇಷ್ಟೇ ಅಲ್ಲದೆ ತರಕಾರಿಯ ಮೇಲೆ ಅಪರೂಪದ ವಿನ್ಯಾಸವನ್ನು ಮಾಡಿ ಪ್ರೇಮ ನಿವೇದನೆಯನ್ನೂ ನೀಡುವುದುಂಟು. ಅನೇಕ ಸಸ್ಯಹಾರಿ ಪ್ರಿಯರು ಹುಟ್ಟು ಹಬ್ಬಕ್ಕೆ ಕಾರ್ವಿನ್ ಕಲೆಯ ಕೇಕ್‌ನ್ನು ಮಾಡಿ ಹಬ್ಬವನ್ನು ಆಚರಿಸುವುದು ಇಂದು ಫ್ಯಾಷನ್ ಆಗಿ ಬಿಟ್ಟಿದೆ.

ಕೆಲವರು ಈ ವಿನ್ಯಾಸಗಳನ್ನು ನೋಡಿದಾಗ ಇದೇನಪ್ಪಾ, ನಮಗೂ ಮಾಡಬಹುದು ಅನ್ಕೋತ್ತಾರೆ, ಅದ್ರೆ ಇದು ಅಷ್ಟು ಸುಲಭದ ಕಲೆಯಲ್ಲ, ಇದಕ್ಕೆ ಪೂರ್ಣ ಪ್ರಾಕ್ಟೀಸ್ ಬೇಕಾಗುತ್ತದೆ. ಇಲ್ಲದಿದ್ದರೆ ನಿಮ್ಮ ವಿನ್ಯಾಸ ಬೇರೆಯಾಗಬಹುದು. ಆದರೆ ಈ ಕಲೆ ನಿಜಕ್ಕೂ ನಮ್ಮನ್ನು ವಿಭಿನ್ನ ವಿನ್ಯಾಸಗಳೆಡೆಗೆ ಆಕರ್ಷಿತರಾಗಲು ಪ್ರೇರೆಪಿಸುತ್ತದೆ. ಸೃಜನಶೀಲ ವ್ಯಕ್ತಿಯಿಂದ ಮಾತ್ರ ಕಾರ್ವಿಂಗ್ ಉತ್ತಮವಾಗಿ ಮತ್ತು ಜನರನ್ನು ಸೆಳೆಯುವಂತೆ ಮಾಡಲು ಸಾಧ್ಯ. ಮನೆಯಲ್ಲೇ ಇರುವ ಮಹಿಳೆಯರಿಗೆ ಇದೊಂದು ಮನೆ ಉದ್ಯಮ ಕೂಡ ಹೌದು. ಕಾರ್ವಿಂಗ್ ಮನೆಯಲ್ಲೇ ಮಾಡುತ್ತಾ ಸಮಯ ಕೂಡ ಕಳೆಯಬಹುದು. ಅದರ ಜೊತೆಗೆ ಹಣ ಕೂಡ ಸಂಪಾದಿಸಬಹುದು.

ಕಾರ್ವಿಂಗ್ ಕಲೆ ಎನ್ನುವಂತದ್ದು ನೀರು ಕುಡಿದಷ್ಟು ಸುಲಭವಲ್ಲ. ಅದನ್ನು ತಯಾರಿಸಲು ಕಡಿಮೆ ಎಂದರೂ ಮೂರರಿಂದ ನಾಲ್ಕು ಗಂಟೆ ಸಮಯ ಬೇಕಾಗುತ್ತದೆ. ಆದರೆ ಅದು ಬಹಳ ಕಾಲ ಉಳಿಯುವಂತದ್ದು ಅಲ್ಲ ಎಂಬುದು ವಾಸ್ತವ.

ಅದೇನೆ ಇರಲಿ, ಕಾರ್ವಿಂಗ್ ಮಾತ್ರ ಎಲ್ಲಾ ಸಮಾರಂಭಗಳಲ್ಲಿ ತನ್ನದೇ ಆದ ಪ್ರಾಶಸ್ತ್ಯವನ್ನು ಪಡೆದುಕೊಳ್ಳುತ್ತಿದೆ. ಇಷ್ಟೇ ಅಲ್ಲದೆ, ಕಲಾಕಾರರಿಗೆ

ಸಂಪಾದನೆಯ ಹಾದಿಯನ್ನು ತೆರೆದಿಡುವ ಮೂಲಕ ಮತ್ತೆ ಕಲಾಕಾರರ ಶಕ್ತಿಯನ್ನು ಇನ್ನಷ್ಟು ಹೆಚ್ಚಿಸಿದೆ. ಕಾರ್ವಿಂಗ್ ಕಲೆಗೆ ಇನ್ನಷ್ಟು ಬೇಡಿಕೆ ಹೆಚ್ಚಾಗಿ ಕಲಾವಿದರ ಕಲೆಗೆ ಬೆಲೆ ಸಿಗುವಂತಾಗಲಿ.

ಕಿರಣ್ ಕುಮಾರ್

ಔಷಧಿ ಪ್ರಾಮುಖ್ಯತೆಯ ಗೋರಂಟಿ

ಹಿತ್ತಲ ಗಿಡ ಮದ್ದಲ್ಲ ಎನ್ನುವುದು ಗಾದೆಮಾತು. ಮನೆಯ ಹಿಂದೆ ಮುಂದೆ ಬೇಲಿಯಲ್ಲೇ ಇರುವ ಗಿಡಗಳ ಔಷಧೀಯ ಗುಣಗಳ ಮಾಹಿತಿಯ ಬಗ್ಗೆ

ನಮಗೆ ತಿಳಿದಿರುವುದಿಲ್ಲ. ಅಂತಹ ಹಿತ್ತಲ ಸಸ್ಯಗಳಲ್ಲಿ ಗೊರಂಟಿಗೆಯೂ–ಒಂದು. ಮುಳ್ಳು ಗೋರಂಟಿಗೆ, ಮುಳ್ಳು ಮದರಂಗಿ, ವಜ್ರದಂತಿ, ಶ್ವೇತ ಪುಷ್ಪ, ಕುರಂಟಕ ಗಿಡಗಳು ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಇದು ತನ್ನೊಳಗೆ ಬಿಚ್ಚಿಟ್ಟುಕೊಂಡಿರುವ ಔಷಧೀಯ ಗುಣಗಳು ಹಲವಾರು. ತನ್ನಿಂದ ತಾನೇ ಎಲ್ಲೆಡೆಯಲ್ಲೂ ಬೆಳೆಯುವ ಗೋರಂಟಿಗೆಯನ್ನು ದಕ್ಷಿಣ ಭಾರತ, ಮುಂಬೈ, ಅಸ್ಸಾಂ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಬಹುದು. ಬೇಲಿಗೆ ಮಾತ್ರ ಸೀಮಿತವಾಗಿದ್ದ ಗೋರಂಟಿಗೆ ಗಿಡವನ್ನು ಈಗಿನ ದಿನಗಳಲ್ಲಿ ಅಲಂಕಾರಿಕ ಗಿಡಗಳಾಗಿಯೂ ಬೆಳೆಸುತ್ತಾರೆ. ಇದರ ವೈಜ್ಞಾನಿಕ ಹೆಸರು ಬರ್ಲೇರಿಯ ಪ್ರಿಯೋನಿಟಿಸ್. ಇದರಲ್ಲಿ ಬಿಳಿ, ಕೆಂಪು, ಹಳದಿ, ನೀಲಿ ಬಣ್ಣದ ಹೂಗಳಿದ್ದು, ಹಳದಿ ಬಣ್ಣದ ಹೂವಿನ ಗಿಡ ಔಷಧಿಗೆ ಹೆಚ್ಚು ಸೂಕ್ತವಾದದ್ದು, 1–2 ಮೀಟರ್ ಎತ್ತರ ಬೆಳೆಯುವ ಈ ಗಿಡಕ್ಕೆ ಮುಳ್ಳುಗಳೇ ಸೌಂದರ್ಯವರ್ಧಕ. ಈ ಪುಷ್ಪಗಳು ಮಲ್ಲಿಗೆಯ ಆಕಾರದಲ್ಲಿದ್ದರೂ, ಸುವಾಸನೆ ರಹಿತವಾಗಿದೆ. ಹಳದಿ ಹೂ ಎಲ್ಲಾ ಋತುಗಳಲ್ಲಿ ಹೂ ಅರಳುವುದಾದರೂ ಮಳೆಗಾಲದಲ್ಲಿ ಅಧಿಕ. ನೀಲಿ ಹೂಗಳು ಚಳಿಗಾಲದಲ್ಲಿ ಬಹಳ ಅಧಿಕವಾಗಿ ಕಾಣಿಸಿಗುತ್ತವೆ. ಈ ಗಿಡದ ಎಲ್ಲಾ ಭಾಗಗಳು ಔಷಧೀಯ ಪ್ರಾಮುಖ್ಯತೆಯನ್ನು ಹೊಂದಿವೆ. ಮಕ್ಕಳಲ್ಲಿ ಜ್ವರ ಮತ್ತು ಕಫ ಕಾಣಿಸಿಕೊಂಡಲ್ಲಿ, ಎರಡು ಚಮಚ ಎಲೆಯ ರಸವನ್ನು ಜೇನುತುಪ್ಪ ಅಥವಾ ಕಲ್ಲುಸಕ್ಕರೆ ಮತ್ತು ನೀರು ಬೆರೆಸಿ ದಿನಕ್ಕೆರಡು ಬಾರಿ ಕೊಟ್ಟರೆ ಬೇಗ ವಾಸಿಯಾಗುವುದು. ಇದರ ಬೇರನ್ನು ನುಣ್ಣಗೆ ಅರೆದು ನೋವುಗಳಿಗೆ ಲೇಪಿಸಬಹುದು. ಅಂಗಾಲುಗಳಲ್ಲಿ ಬಿರುಕು, ಸೀಳು ಕಾಣಿಸಿಕೊಂಡಲ್ಲಿ ಗೋರಂಟಿ ಎಲೆಯ ರಸವನ್ನು ಹಚ್ಚಬಹುದು. ಕೂದಲು ಉದುರುವುದಕ್ಕೆ ಇದರ ಎಲೆಯ ರಸವನ್ನು ಎಳ್ಳೆಣ್ಣೆ ಜೊತೆ ಸೇರಿಸಿ ತಯಾರಿಸಿದ ತೈಲವನ್ನು ಹಚ್ಚಬೇಕು. ಅಥವಾ ಎಲೆಯ ರಸವನ್ನು ರಾತ್ರಿ ಮಲಗುವಾಗ ಕೂದಲಿನ ಬುಡಕ್ಕೆ ಹಚ್ಚಿ ಉಜ್ಜಿಕೊಳ್ಳಬೇಕು.ಎಲೆಯ ರಸವನ್ನು ಕಿವಿ ಸೋರುವುದಕ್ಕೂ ಉಪಯೋಗಿಸಬಹುದು. ವಸಡು ರಕ್ತಸ್ರಾವಕ್ಕೆ ಎಲೆಯ ರಸವನ್ನು ಜೇನಿನೊಂದಿಗೆ ಲೇಪಿಸವುದು ಉತ್ತಮ.

ಮೇಘಲಕ್ಷ್ಮಿ

ಅನಾನಸು ಕಿಂಗ್‌ಗೆ ಒಲಿದ ಕೃಷಿ ಗೌರವ ಡಾಕ್ಟರೇಟ್

ಕೃಷಿ ಮಾಡುವುದು ಎಂದರೆ ಈಗಿನ ಕಾಲದ ಯವಕರಿಗೆ ನಿರಾಸಕ್ತಿ. ಕೃಷಿ ಕ್ಷೇತ್ರದಿಂದ ಎಲ್ಲರೂ ಹಿಂದೆ ಸರಿಯುವವರೇ ಆಗಿದ್ದಾರೆ. ರೈತರ ಆತ್ಮಹತ್ಯೆ ಪ್ರಕರಣಗಳು ಅವರನ್ನು ಕೃಷಿಯಿಂದ ಮತ್ತಷ್ಟು ದೂರ ಉಳಿಯುವಂತೆ ಮಾಡುತ್ತಿದೆ.

ಪ್ರಸ್ತುತ ದಿನಗಳಲ್ಲಿ ಕೃಷಿಯಲ್ಲಿ ಏಕರೂಪಿ ಬೆಳೆಗೆ ಆದ್ಯತೆ ನೀಡುತ್ತಿರುವವರೇ ಹೆಚ್ಚು. ಆದರೆ ಮಿಶ್ರ ಬೆಳೆಯನ್ನು ಬೆಳೆಯುವದರೊಂದಿಗೆ ಕೃಷಿಯಲ್ಲಿ ಕಷ್ಟಪಟ್ಟ ದುಡಿಮೆಯ ಫಲಕ್ಕೆ ಗೌರವ ಡಾಕ್ಟರೇಟ್ ಪ್ರಶಸ್ತಿ ಗಳಿಸಿದ ಡಾ. **ಅಬ್ದುಲ್ ರವೂಫ್ ಶೇಕ್ ಸಾಹೇಬ್** ಅವರು ಇಂದಿನ ಯುವ ಕೃಷಿಕರಿಗೆ ಮಾದರಿ ಎಂದರೆ ಅತಿಶಯೋಕ್ತಿಯಾಗಲಾರದು.

ಡಾ. ಸಾಹೇಬರು ಅನಾನಸು ಕೃಷಿಯಲ್ಲಿ ಹೆಸರುವಾಸಿ. ಇವರು ಕರ್ನಾಟಕದಲ್ಲಿ ಅನಾನಸು ಕೃಷಿ ಇಲ್ಲದಿದ್ದ ಕಾಲದಲ್ಲಿ ಅಂದರೆ ಸುಮಾರು 70–80 ರ ದಶಕದಲ್ಲಿ ಅತೀ ಹೆಚ್ಚು ಅನಾನಸು ಬೆಳೆದ ಕೃಷಿಕ ಎಂಬ

ಹೆಗ್ಗಳಿಕೆಗೆ ಪಾತ್ರರಾದವರು.

ಹೀಗೆ, ಅನಾನಸು ಬೆಳೆಯಲ್ಲಿ ಯಶಸ್ಸು ಸಾಧಿಸಿದ ಸಾಹೇಬರು ಕೆಲವೇ ವರ್ಷಗಳಲ್ಲಿ 210 ಎಕರೆಯಲ್ಲಿ 5250 ಮೆಟ್ರಿಕ್ ಟನ್ ಅನಾನಸು ಬೆಳೆದು ಖ್ಯಾತಿಗಳಿಸಿದ್ದಾರೆ. ಸಾಹೇಬರು ಕೇವಲ ಅನಾನಸು ಕೃಷಿ ಮಾತ್ರವಲ್ಲದೆ, ಅನಾನಸನ್ನು ಸಂಸ್ಕರಿಸಿ ಒಂದು ಬ್ರಾಂಡ್ ಹೆಸರಿನಲ್ಲಿ ಮಾರಾಟ ಮಾಡಿದ್ದಾರೆ. ಈ ಕಾರಣದಿಂದಾಗಿ ಡಾ. ಶೇಕ್ ಸಾಹೇಬರ ಅನಾನಸು ಉತ್ಪನ್ನ ಇಂದು ದೇಶ–ವಿದೇಶಗಳಲ್ಲಿ ಬಹು ಬೇಡಿಕೆಯ ಫಲವಾಗಿದೆ.

ಏಳನೇ ಕ್ಲಾಸ್ ಓದಿದವನಿಗೆ ಡಾಕ್ಟರೇಟ್ ಗೌರವ. ಕೂಲಿ ಕೆಲಸಕ್ಕೆ ಹೋಗಿ ಜೀವನ ನಡೆಸುತ್ತಿದ್ದವರು ಇಂದು 500 ಎಕರೆ ಒಡೆಯ. ಕಡ್ಲೆಕಾಯಿ ಮಾರುತ್ತಿದ್ದವರು ಇಂದು ಕೃಷಿ ವಿಜ್ಞಾನಿ! ಸಾಧನೆಗೆ ಯಾವ ಕ್ಷೇತ್ರವಾದರೇನು ಛಲವೊಂದಿದ್ದರೆ ಸಾಕು ಎಂದು ತೋರಿಸಿಕೊಟ್ಟವರಲ್ಲಿ ಡಾ. ಅಬ್ದುಲ್ ರವೂಫ್ ಶೇಕ್ ಸಾಹೇಬ್ ಕೂಡಾ ಒಬ್ಬರು.

ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಎಂಬ ಪ್ರದೇಶದ ಬಡ ಕುಟುಂಬದಲ್ಲಿ ಜನಿಸಿದರು. ತಂದೆಯ ಮರಣ ನಂತರ ಸಾಹೇಬರಿಗೆ ತನ್ನ 11ನೆಯ ವಯಸ್ಸಿನಲ್ಲಿ ಮನೆ ಜವಾಬ್ದಾರಿಗಳು ಹೆಗಲೇರಿದವು. ಇದ–ರಿಂದಾಗಿ ವಿದ್ಯಾಭ್ಯಾಸಕ್ಕೆ ತೊಡಕುಂಟಾಗಿ ಶಾಲೆ ಬಿಡಬೇಕಾಯಿತು. ಆದರೂ ಛಲ ಬಿಡದ ಸಾಹೇಬರು ಸಂಪಿಗೆ ಹೂ ಮಾರಾಟ, ಬನವಾಸಿಯ ಬೀದಿಯಲ್ಲಿ ಕಡ್ಲೆಕಾಯಿ ಮಾರಾಟ ಹಾಗೂ ಕೇವಲ 75 ಪೈಸೆಗೆ ಕೆಂಪೇಗೌಡ ಎಂಬವರ ತೋಟದಲ್ಲಿ ಕೂಲಿ ಮಾಡಿ ಜೀವನ ಸಾಗಿಸಿದರು. ಕಾಲಾಂತರದಲ್ಲಿ ತಂದೆಯ ಪಿತ್ರಾರ್ಜಿತ ನಾಲ್ಕು ಎಕರೆ ಭೂಮಿ ಸಾಹೇಬರ ಪಾಲಾಯಿತು. ಇದೇ ಇವರ ಕೃಷಿ ಬದುಕಿಗೆ ದಾರಿ ದೀಪವಾಯಿತು. ಡಾ. ಅಬ್ದುಲ್ ರವೂಫ್ ಶೇಕ್ ಸಾಹೇಬರು ಯಾವುದೇ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪದವಿ ಪಡೆಯದಿದ್ದರೂ ಅವರು ಒಬ್ಬ ಕೃಷಿ ವಿಜ್ಞಾನಿ. ಇವರ ಮನೆಯೇ ಒಂದು ಕೃಷಿ ವಿಶ್ವವಿದ್ಯಾನಿಲಯ ಇದ್ದಂತೆ. ಅವರ ಮನೆಗೆ ಅದೆಷ್ಟೋ ಕೃಷಿ ವಿಜ್ಞಾನಿಗಳು ಬಂದು ಇವರ ಅನುಭವಗಳನ್ನು ಕೇಳಿ ತಿಳಿದುಕೊಳ್ಳುತ್ತಾರೆ. ಅಷ್ಟೇ ಅಲ್ಲದೆ ಸಾಹೇಬರು ಕೀಟ ಹಾಗೂ ರೋಗ ಭಾದೆ ತಡೆಯುವ ಜೈವಿಕ ಅನ್ವೇಷಕರೂ ಆಗಿದ್ದಾರೆ.

ಸಾಹೇಬರ ಕೃಷಿ ಸಾಧನೆಯನ್ನು ಗುರುತಿಸಿ ಹಲವು ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ. ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ, ಕರ್ನಾಟಕ ಸರಕಾರದ ಪ್ರತಿಷ್ಠಿತ ಎಚ್.ಎಮ್ ಮರಿಗೌಡ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಇವರ ತೆಕ್ಕೆಯಲ್ಲಿವೆ.

ಸಾಹೇಬರು ಕೃಷಿ ತೋಟದಲ್ಲಿ 500ರಕ್ಕೂ ಅಧಿಕ ಕುಟುಂಬಗಳಿಗೆ ಕೆಲಸ ನೀಡುವುದರೊಂದಿಗೆ, ಕಾರ್ಮಿಕರ ಮಕ್ಕಳಿಗೆ "ಈಡನ್ ಟೀ ಇಂಗ್ಲಿಷ್ ಸ್ಕೂಲ್" ಕಟ್ಟಿ ಅಲ್ಲಿ ಉಚಿತ ಶಿಕ್ಷಣವನ್ನು ನೀಡುತ್ತಿದ್ದಾರೆ. ರಂಜಾನ್ ಹಾಗೂ ದೀಪಾವಳಿ ದಿನದಂದು ಹೊಸ ಉಡುಪು, ಅಕ್ಕಿ, ಬಾಳೆಗೊನೆ ನೀಡುತ್ತಾರೆ. ದೇಹೀ ಎಂದು ಬಂದವರನ್ನು ಬರಿಕೈಯಲ್ಲಿ ಎಂದೂ ಕಳುಹಿಸಿದ ಉದಾಹರಣೆ ಇಲ್ಲ.

ದಿನೇಶ್

ತಲೆಯಲ್ಲಿ ಹುಳಬಿಟ್ಟ ನೀನು "ಅನ್ನೋನ್"ನು

ಕಥೆ ಎಂದಾಕ್ಷಣ ಆದಿ ಮತ್ತು ಅಂತ್ಯ ಇರಬೇಕು.ಆದರೆ ಆದಿ ಮತ್ತು ಆಂತ್ಯ ಹೀಗೆಯೇ ಇರಬೇಕು ಎಂಬ ನಿಯಮವೇನಿಲ್ಲ. ಕಥೆಯ ಕ್ರಮ ಅದರ ಬೇಡಿಕೆ ಇದ್ದಂತೆ ಸಾಗುತ್ತದೆ. ಸಿನಿಮಾ ಪ್ರೇಮಿಗಳಲ್ಲಿ ಗೊಂದಲವನ್ನು ಮೂಡಿಸುವ ಸಲುವಾಗಿಯೇ ಕಥೆಯನ್ನು ರಚಿಸುವುದು, ಪ್ರಸ್ತುತಪಡಿಸುವ ರೀತಿಯನ್ನು ಭಿನ್ನವಾಗಿಸುವುದು, ಹಲವಾರು ಟ್ವಿಸ್ಟ್‌ಗಳನ್ನು ಸೇರಿಸುವುದು, ಪ್ರೇಕ್ಷಕರಿಗೆ ಅರ್ಥವಾಗಲಿಲ್ಲ ಎಂದಾಕ್ಷಣ ಅದು ನಿರ್ದೇಶಕರ ಜಾಣ್ಮೆ ಎಂದು ಸಂಭ್ರಮಿಸುವ ಪರಿ ಉಪೇಂದ್ರರವರ ಚಿತ್ರಗಳಲ್ಲಿ ನಡೆದು ಬಂದಿದೆ.ಸಸ ಇಂತಹುದೇ ಅಲೋಚನೆಯೊಂದಿಗೆ ಎದುರಿಸಬಹುದಾದ ಉಪೇಂದ್ರ ಸಿನಿಮಾದ ಪುನಾರವಾರ್ತಿತ ಎಂದೆನಿಸುವ 'ಉಪ್ಪಿ–2' ಚಿತ್ರ ತೆರೆಗೆ ಬಂದು ಸದ್ದು ಮಾಡಿ ಪ್ರೇಕ್ಷಕ ಮಹಾಶಯನ ತಲೆಯಲ್ಲಿ ಹುಳ ಬಿಟ್ಟಿದೆ.

ನೀನು (ಉಪೇಂದ್ರ) ಹೆಸರಿನ ,ವರ್ತಮಾನದಲ್ಲಷ್ಟೇ ನಂಬಿಕೆ ಇಡಬೇಕು, ಭೂತ ಭವಿಷ್ಯವನ್ನು ಚಿಂತಿಸಿ ಇಂದಿನ ಸುಖವನ್ನು ಹಾಳು ಮಾಡಿಕೊಳ್ಳಬಾರದು ಎಂದು ಬೋಧಿಸುವ ವ್ಯಕ್ತಿಯೇ ಚಿತ್ರದ ನಾಯಕ. ಪರಿಶ್ರಮದಲ್ಲೇ ಬದುಕುವ ನಡು ವಯಸ್ಸಿನ ನಾಯಕನನ್ನು ಹುಡುಕಿಕೊಂಡು ಬರುವ "ಖುಷಿ" ಎಂಬ ಹುಡುಗಿ ಉಪೇಂದ್ರ ಸಿನಿಮಾದಲ್ಲಿ "ನಾನು"ಅನ್ನು ಹುಡಿಕಿ ಬರುವ ದಾಮಿನಿಗೆ

ಹೋಲಿಕೆಯಾಗುತ್ತಾಳೆ. ಆದರೆ ಭೂಮಿಯಲ್ಲಿ ಬದುಕುವ ಕೆಲವು ಭೂಗತ ಪಾತಕಿಗಳು ಹಾಗೂ ಭವಿಷ್ಯವನ್ನೇ ಚಿಂತಿಸುವ ಕೆಲವು ಪೋಲಿಸ್ ಅಧಿಕಾರಿಗಳು ಖುಷಿಯನ್ನು ದಾರಿ ತಪ್ಪಿಸುತ್ತಾರೆ.ಈ ಗೊಂದಲಗಳ ಮಧ್ಯೆ ಖುಷಿಗೆ "ನೀನು" ಅನ್ನು ಹುಡುಕುವುದು ಸವಾಲಾಗುತ್ತದೆ.

ಹಿಂದೆ ಉಪೇಂದ್ರ 'ಎ' ಮತ್ತು "ಉಪೇಂದ್ರ"ಚಿತ್ರಗಳಲ್ಲಿ ಗೊಂದಲಗಳನ್ನು ಸೃಷ್ಟಿಸಿ ಗೆದ್ದಿದ್ದಾರೆ. ಅವರ ಆ ಚಿತ್ರಗಳಲ್ಲಿನ ಶ್ರೇಯಸ್ಸು ತಂದು ಕೊಟ್ಟಂತಹ ರಿದಮಿಕ್ ಡೈಲಾಗುಗಳಂತಹ ಡೈಲಾಗು "ಉಪ್ಪಿ–2"ಸಿನಿಮಾದಲ್ಲಿ ಬೆರಳೆಣಿಕೆಯಲ್ಲಿ ಮಾತ್ರ ಕಾಣಿಸಿಗುತ್ತವೆ. ವರ್ತಮಾನದಲ್ಲಿ ಬದುಕಬೇಕು ಹಾಗೂ ಹಿಂದಿನದು ಮುಂದಿನದನ್ನು ಯೋಚಿಸಬೇಡ; ಕಣ್ಮುಂದೆ ಇರುವುದಷ್ಟೇ ಸತ್ಯ, ಶ್ರಮದಲ್ಲಿ ನಂಬಿಕೆಯಿಡು ಎಂಬ ಸುಲಭ ತತ್ವಜ್ಞಾನದ ಸೂತ್ರವೊಂದನ್ನು ಹಿಡಿದು ಸಿನಿಮಾದುದ್ದಕ್ಕೂ ಪ್ರೇಕ್ಷಕರನ್ನೂ ಜಾಡಿಸಿ ಬಿಡುತ್ತಾರೆ.ಆದರೆ ಸಂದರ್ಭಗಳು ತೀರಾ ಅಸಭ್ಯವಾಗಿ ತೋರುವುದು ಬೇಸರ ತರಿಸುತ್ತದೆ. ಹಲವಾರು ಭಾರಿ ಪ್ರೇಕ್ಷಕರಲ್ಲಿ ಗೊಂದಲ ಸೃಷ್ಟಿಸುವ ಉದ್ದೇಶದಿಂದ ಚಿತ್ರಕಥೆ ರೂಪಿಸಿದಂತಿದೆ. ಒಂದು ಕಥೆಯಲ್ಲಿ ಎಷ್ಟು ಹೇಳಬೇಕು ಅದಕ್ಕಿಂತ ಹೆಚ್ಚಿದದ್ದನ್ನು ಪ್ರೇಕ್ಷಕರು ಮಸ್ತಕಕ್ಕೆ ತುರುಕುವ ಪ್ರಯತ್ನ ಮಾಡಿ ಪ್ರೇಕ್ಷಕರನ್ನು ಹುಚ್ಚನಾಗಿಸುವಲ್ಲಿ ಯಶಸ್ವಿಯಗಿದ್ದಾರೆ. ಉಪೇಂದ್ರ ಹಲವು ಬಾರಿ ಯಶಸ್ಸುಯಾಗಿರುವುದು ತಮ್ಮ ಇಂತಹ ಗಟ್ಟಿ ನಿರ್ಧಾರಗಳಿಂದ ಹಾಡುಗಳ ರಚನೆ ಉಪೇಂದ್ರ ಅಭಿಮಾನಿಗಳಲ್ಲಿ ಖುಷಿಯನ್ನು ಮೂಡಿಸುತ್ತವೆ .ಉಪೇಂದ್ರ ಸಿನಿಮಾದಲ್ಲಿ ಕಾಣಿಸಿದ ಪಾತ್ರವರ್ಗವೇ ಇಲ್ಲಿಯೂ ಸಹ ಕಾಣಿಸಿಗುತ್ತದೆ. ಉಪ್ಪಿ–2 ಸಿನಿಮಾದಲ್ಲಿ ಹುಚ್ಚುತನಕ್ಕೆ ಮೊದಲ ಆದ್ಯತೆ ಸಿಕ್ಕಿವೆ ಎನಿಸುತ್ತದೆ. ಪ್ರೇಕ್ಷಕ ತಾರ್ಕಿಕ ಆಲೋಚನೆಗೆ ಇಳಿದರೆ ಹುಚ್ಚನಾಗುದರಲ್ಲಿ ಸಂದೇಹವಿಲ್ಲ. ಉಪೇಂದ್ರ ತಮ್ಮ ಹಳೆಯ ಶೈಲಿಯನ್ನೇ ಮುಂದುವರಿಸಿಕೊಂಡು ತಮ್ಮದೇ ಗೊಂದಲಗಳನ್ನು ಪ್ರೇಕ್ಷಕನ ಮೇಲೆ ಹೇರಿ, ಹಿಂದಿನ ಚಿತ್ರಗಳ ಪುನಾರಾವರ್ತಿಸಿದ್ದಾರೆ.ನಿರ್ದೇಶಕರು ತಾವು ಹೇಳಬೇಕಾದದ್ದನ್ನು ತೀರಾ ಸುಲಭದಲ್ಲಿ ಹೇಳಿದ್ದಾರೆ. ಉಪೇಂದ್ರವರೇ ಸಿನಿಮಾವನ್ನು ಗೆಲ್ಲಿಸಲು ಸಾಧ್ಯವಿಲ್ಲವೆ" ಎಂಬ ಪ್ರಶ್ನೆಯೊಂದು ಮನಸ್ಸಿನಲ್ಲಿ ಮೂಡುತ್ತವೆ.

ಶ್ವೇತಾ ಸುವರ್ಣ

ಗೂಗಲ್ ಗೆ 17 ರ ಸಂಭ್ರಮ

ಇಂದಿನ ಕಂಪ್ಯೂಟರ್‌ಯುಗದಲ್ಲಿ ಗೂಗಲ್ ಎನ್ನುವುದು ಅತ್ಯಂತ ಉಪಯೋಗಿ ಸಾಧನವಾಗಿದೆ. ಈ ಸರ್ಚ್‌ಇಂಜಿನ್ ಅನ್ನು ಎಲ್ಲಾ ವರ್ಗದ ಜನರು ಉಪಯೋಗಿಸುತ್ತಿದ್ದಾರೆ. ಗೂಗಲ್ ಎನ್ನುವುದು ಇಂದಿನ

ದಿನಗಳಲ್ಲಿ ಎಲ್ಲಾ ವರ್ಗದ ಜನರಲ್ಲೂ ಜನಪ್ರಿಯವಾಗಿದೆ. ಸ'ಮಗ್ರ ಮಾಹಿತಿ ನೀಡುವ ಗೂಗಲ್ ತನ್ನ ಹದಿನೇಳರ ಹುಟ್ಟುಹಬ್ಬವನ್ನು ಆಚರಿಸಿಕೊಂಡಿತು.

ಇದರ ಸವಿ ನೆನಪಿಗಾಗಿ ರೆಟ್ರೋ ಹುಲಿ ಎಂಬ ಲೋಗೊವನ್ನು ತನ್ನ ಮುಖಪುಟದಲ್ಲಿ ಅನಾವರಣ ಮಾಡಲಾಗಿತ್ತು. ಗೂಗಲ್ ನ ಮುಖ್ಯ ಕಾರ್ಯ ನಿರ್ವಾಹಣ ಅಧಿಕಾರಿ ಭಾರತೀಯ ಮೂಲದ ಸುಂದರ್ ಪಿಚೈ ಎಂಬುದು ಭಾರತೀಯರಿಗೆ ಹೆಮ್ಮೆಯ ಸಂಗತಿ. ಇದರ ಹದಿನೇಳು ವರ್ಷದ ಪ್ರಯಾಣದಲ್ಲಿನ ಸಾಧನೆಗಳ ಛಾಯಚಿತ್ರಗಳನ್ನು ವಿಶೇಷ ರೀತಿಯಲ್ಲಿ ಹಾಕಲಾಗಿತ್ತು.

ಹರ್ಷಿತ ಶೆಟ್ಟಿ

ಅಂಬೇಡ್ಕರ್ ಪ್ರತಿಯೊಬ್ಬರಿಗೂ ಆದರ್ಶ ವ್ಯಕ್ತಿ:ಪ್ರೊ.ರವಿವರ್ಮ

ಮಂಗಳಗಂಗೋತ್ರಿ: ಉದಾತ್ತ ಮಾನವತಾವಾದಿ ಅಂಬೇಡ್ಕರ್ ಅವರು ದೇಶಕ್ಕೆ ಭದ್ರವಾದ ಸಂವಿಧಾನವನ್ನು ಕಟ್ಟಿಕೊಡುವುದರೊಂದಿಗೆ ಸಮಾಜದಲ್ಲಿ ಏಕತೆಯೊಂದಿಗೆ ಶೋಷಣೆಮುಕ್ತ ಸಮಾಜವನ್ನು ಕಟ್ಟಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದರು. ಅಂಬೇಡ್ಕರ್ ಅವರ 125ನೇ ವರ್ಷಾಚರಣೆ ಕಾರ್ಯಕ್ರಮವು ಜನರಲ್ಲಿ ಜಾಗೃತಿಯ ಭಾವದೊಂದಿಗೆ ಸಮಾನತೆಯ ಬಲಿಷ್ಠ ಸಮಾಜ ನಿರ್ಮಾಣಕ್ಕೆ ಪ್ರೇರಣೆಯಾಗಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ರಮಾನಾಥ ರೈ ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯ ಅಂಬೇಡ್ಕರ್ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಮಂಗಳೂರು ವಿವಿಯ ಮಂಗಳಾ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 125 ನೇ ಜಯಂತಿ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಂಬೇಡ್ಕರ್ ಅವರು ಕೊಟ್ಟಿರುವ ಸಂವಿಧಾನ ಹಾಗೂ ದಿವಂಗತ ದೇವರಾಜ್ ಅರಸ್ ಅವರ ತಂತ್ರಗಾರಿಕೆಯನ್ನು ಬಳಸಿಕೊಂಡು ಬಲಿಷ್ಠ ಭಾರತವನ್ನು ನಿರ್ಮಿಸಬಹುದು ಎಂದು ಕರ್ನಾಟಕ ಸರಕಾರದ ಅಡ್ವಕೇಟ್ ಜನರಲ್ ಪ್ರೊ.ರವಿವರ್ಮ ಹೇಳಿದರು.

ಇಂದು ಹಲವಾರು ಶಿಕ್ಷಣ ಸಂಸ್ಥೆಗಳು, ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಬೇರೆ ಪ್ರಭಾವಿ ಜಾತಿಗಳ ಪ್ರಮುಖರ ಮಾಲಿಕತ್ವದಲ್ಲಿ ನಡೆಯುತ್ತಿವೆ. ಆದರೆ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳು ಬಹಳಷ್ಟು ಇವೆ ಆದರೆ ಒಂದೇ ಒಂದು ಶಿಕ್ಷಣ ಸಂಸ್ಥೆ ದಲಿತ ಸಮುದಾಯದ ವ್ಯಕ್ತಿಗಳ ನೇತೃತದಲ್ಲಿ ಇಲ್ಲದಿರುವುದು ವಿಷಾದಕರ ಎಂದು ಅವರು ತಿಳಿಸಿದರು.

ಬಳಿಕ ಮಾತನಾಡಿದ ಆರೋಗ್ಯ ಸಚಿವ ಯು.ಟಿ.ಖಾದರ್, ಹಿಂದೂಗಳಿಗೆ ಭಗವದ್ಗೀತೆ,ಮುಸ್ಲಿಮರಿಗೆ ಕುರಾನ್, ಕ್ರಿಶ್ಚಿಯನ್ನರಿಗೆ ಬೈಬಲ್ ಎಷ್ಟು ಶ್ರೇಷ್ಠವೋ ಎಲ್ಲಾ ಭಾರತೀಯರಿಗೂ ಸಂವಿಧಾನ ಶ್ರೇಷ್ಠವಾದುದು. ಆದ್ದರಿಂದ ಅಂಬೇಡ್ಕರ್ ಅವರ ಜಾತ್ಯಾತೀತ ತತ್ವವನ್ನು ನಾವು ಅರ್ಥಮಾಡಿಕೊಂಡು ನಮ್ಮೆಲ್ಲರ ಜೀವನದಲ್ಲಿ ಅಳವಡಿಸಿಕೊಂಡು ನಡೆಯಬೇಕಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಕೆ.ಭೈರಪ್ಪ ಅವರು ವಹಿಸಿದ್ದರು.

ವಿದ್ಯಾರ್ಥಿ ಪರಿಷತ್‌ನ ಆಯ್ಕೆ

ಮೊದಲ ಪುಟದಿಂದ.....

ಈ ಚುನಾವಣೆಯಲ್ಲಿ ಯಾವುದೇ ಭಿನ್ನಭಿಪ್ರಾಯ ಕಂಡು ಬಂದಿಲ್ಲ 60:40 ರ ಪ್ರಕಾರ ಚುನಾವಣ ನಡೆಸಲಾಗಿದೆ.

ವಿದ್ಯಾರ್ಥಿ ನಾಯಕರು ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಯೊಂದಿಗೆ ಸಮಾಲೋಚನೆ ನಡೆಸುತ್ತಿರುವುದು.

ವಿಶ್ವವಿದ್ಯಾನಿಲಯದ ಅಧ್ಯಕ್ಷನಾಗಿ ಆಯ್ಕೆಯಾಗಿರುವುದು ಹೆಮ್ಮೆ ತಂದಿದೆ ಹಾಗೂ ಪ್ರತಿ ವರುಷ ಚುನಾವಣೆ ಹಂತ ಇದೆ ಹಾಗೇ ನಾಯಕರು ಕೂಡ ಆಯ್ಕೆ ಆಗುತಿದ್ದಾರೆ. ಆದರೆ ಈ ಬಾರಿ ವಿಭಿನ್ನವಾಗಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ಕಾರ್ಯನಿರ್ವಹಿಸುತ್ತೇವೆ. ಅದಕ್ಕೆ ವಿದ್ಯಾರ್ಥಿಗಳೆಲ್ಲರ ಸಹಕಾರ ಅಗತ್ಯಎಂದು ವಿದ್ಯಾರ್ಥಿ ಸಂಘದ ಅಧ್ಯಕ್ಷ ವಸಂತ್ ಶೆಟ್ಟಿ ತಿಳಿಸಿದ್ದಾರೆ. ಉಪಾಧ್ಯಕ್ಷರಾಗಿ ಬಯೋಲಜಿ ವಿಭಾಗದ ಶಂಕರ್ ಕುಡ್ವ, ಕಾರ್ಯದರ್ಶಿಯಾಗಿ ಎಂ.ಕಾಮ್ ವಿಭಾಗದ ವಿಶ್ವನಾಥ್ ಕಲ್ಲಿ, ಉಪ ಕಾರ್ಯದರ್ಶಿಯಾಗಿ ಫಿಸಿಕ್ಸ್ ವಿಭಾಗದ ಅನಿಲ್ ಕೊಟ್ಟಾರಿ, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಕನ್ನಡ ವಿಭಾಗದ ಕಾಜೊಲ್ ಹಾಗೂ ಉಪ ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಚೇತನ್ ಅವರು ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿ ಸಂಪಾದಕರು

ಕಿರಣ್
ದಿನೇಶ. ಕೆ
ಹರ್ಷಿತಾ ಶೆಟ್ಟಿ
ಸಾಯಿರಾಜ್
ಶ್ವೇತ
ಶ್ರೇಯ

ಪ್ರಕಾಶಕರು ಸಂಪಾದಕರು: ಪ್ರೊ. ಜಿ.ಪಿ ಶಿವರಾಂ, ಅಧ್ಯಕ್ಷರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, **ಮಂಗಳಗಂಗೋತ್ರಿ–574199. ದ.ಕ**
ಕಾರ್ಯಕಾರಿ ಸಂಪಾದಕರು: ಪ್ರೊ. ವಹೀದಾ ಸುಲ್ತಾನ. ಮುದ್ರಕರು: ನೆಡ್ ಪ್ರಿಂಟ್ಸ್, ಯೆಯ್ಯಾಡಿ, ಮಂಗಳೂರು.